# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-107/2017/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 20/1/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ.ಮರುಳಸಿದ್ದಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, (2) ಶ್ರೀ.ಹರೀಶ್, ತಾಂತ್ರಿಕ ಸಹಾಯಕರು, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, (3) ಶ್ರೀಮತಿ.ಲತಾ, ಅಧ್ಯಕ್ಷರು, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, ಮತ್ತು (4) ಶ್ರೀ.ನೀಲಪ್ಪ, ಸದಸ್ಯರು, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ, ಇವರ ವಿರುದ್ಧದ ನಡವಳಿ ಕುರಿತು.

******

1. ಶ್ರೀ.ನಾಗರಾಜ್ ಬಿನ್ ನಿಂಗಪ್ಪ, ಚಿಕ್ಕ ಅರಕೆರೆ ಗ್ರಾಮ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ಮರುಳಸಿದ್ದಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, (2) ಶ್ರೀ.ಲಕ್ಷ್ಮೀಪತಿ, ಕಾರ್ಯನಿರ್ವಾಹಕ ಅಧಿಕಾರಿ, ಜಗಳೂರು ತಾಲ್ಲೂಕು, (3) ಶ್ರೀ.ಹರೀಶ್, ತಾಂತ್ರಿಕ ಸಹಾಯಕರು, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, (4) ಶ್ರೀಮತಿ.ಲತಾ, ಅಧ್ಯಕ್ಷರು, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, ಮತ್ತು (5) ಶ್ರೀ.ನೀಲಪ್ಪ, ಸದಸ್ಯರು, ಗುತ್ತಿದುರ್ಗ ಗ್ರಾಮಪಂಚಾಯಿತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ಪ್ರಪತ್ರ-1 ರಲ್ಲಿ ಗುತ್ತಿದುರ್ಗ ಪಂಚಾಯತ್ ವ್ಯಾಪ್ತಿಯಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯನ್ವಯ ಚಿಕ್ಕಅರಕೆರೆ-ಚದುರಗುಳ್ಳ ಕೆರೆ ಅಂಚಿನ ನಕಾಶೆಯಲ್ಲಿ ರಂಗಪ್ಪನ ಜಮೀನಿನವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ, ಚಿಕ್ಕಅರಕೆರೆ ಗ್ರಾಮದ ಚೌಡಮ್ಮ ಕೋಂ ಕೆಂಚಪ್ಪ ಇವರ ಜಮೀನಿನ ಹತ್ತಿರ ಫೀಡರ್ ಛಾನಲ್ ಮತ್ತು ಚಿಕ್ಕಅರಕೆರೆ ಸ.ನಂ.78 ರ ಪಕ್ಕದಲ್ಲಿರುವ ಸರ್ಕಾರಿ ಹಳ್ಳಕ್ಕೆ ಫೀಡರ್ ಛಾನಲ್ ಕಾಮಗಾರಿಗಳನ್ನು ಜೆ.ಸಿ.ಬಿ.ಯಂತ್ರದ ಸಹಾಯದಿಂದ ಮಾಡಿ, ಸುಳ್ಳು ಎನ್.ಎಂ.ಆರ್, ಎಂ.ಬಿ, ಮತ್ತು ಎಂ.ಐ.ಎಸ್. ವರದಿ ಮಾಡಿ ಹಣವನ್ನು ಬಿಡಿಸಿಕೊಂಡಿರುತ್ತಾರೆ. ಇದರಿಂದ ನಿಜವಾದ ಕೂಲಿ ಕಾರ್ಮಿಕರಿಗೆ ತೊಂದರೆಯಾಗಿರುತ್ತದೆಯೆಂದು ಆಪಾದಿಸಿ ಮೇಲ್ಕಂಡ ಕಾಮಗಾರಿಗಳ ಬಗ್ಗೆ ಸ್ಥಳ ಪರಿಶೀಲನೆ

ನಡೆಸಿ ದಸ್ತಾವೇಜುಗಳನ್ನು ಪರಿಶೀಲಿಸಿ, ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಕೋರಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಬಗ್ಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ದಾವಣಗೆರೆ ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು (ಪ್ರಭಾರ) ಕರ್ನಾಟಕ ಲೋಕಾಯುಕ್ತ ದಾವಣಗೆರೆ ಇವರು ವರದಿಯನ್ನು ಸಲ್ಲಿಸಿದ್ದು, ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

i. ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು, ಗುತ್ತಿದುರ್ಗ ಗ್ರಾಮಪಂಚಾಯಿತಿ ಪಿ.ಡಿ.ಓ.ರವರಾದ ಮರುಳಸಿದ್ದಪ್ಪ ಇವರು ಗ್ರಾಮಪಂಚಾಯ್ತಿ ಅಧ್ಯಕ್ಷರಾದ ಲತಾ, ಸದಸ್ಯರಾದ ನೀಲಪ್ಪ ಹಾಗೂ ತಾಂತ್ರಿಕ ಸಹಾಯಕರಾದ ಹರೀಶ್ ಇವರೊಂದಿಗೆ ಸೇರಿಕೊಂಡು ಅರ್ಜಿಯಲ್ಲಿ ಆಪಾದಿಸಿರುವ 1ನೇ ಕಾಮಗಾರಿಯಾದ 2016-17ನೇ ಸಾಲಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿಯಲ್ಲಿ ಗುತ್ತಿದುರ್ಗ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಚಿಕ್ಕರಕೆರೆ-ಚದುರಗೊಳ್ಳ ಕೆರೆ ಹಂಚಿನ ನಕಾಶೆಯಲ್ಲಿ ರಂಗಪ್ಪನ ಜಮೀನಿನವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಅಲ್ಲಿಯ ಗ್ರಾಮಪಂಚಾಯ್ತಿಯ ಸದಸ್ಯರಾದ ನೀಲಪ್ಪ ಕೋಂ ನಿಂಗಪ್ಪ ಎಂಬುವವರು ಸೇರಿಕೊಂಡು ಯಂತ್ರಗಳಿಂದ ಮಾಡಿಸಿ ಅದನ್ನು ಕೂಲಿ ಕಾರ್ಮಿಕರು ಮಾಡಿದಂತೆ ದಾಖಲೆ ಸೃಷ್ಟಿಸಿಕೊಂಡಿರುವುದು ಹಾಗೂ ಇದರಲ್ಲಿ ಬಂಗಾರಮ್ಮ ಎಂಬುವವರು ದಿ.13/5/16 ರಂದು ಮೃತಪಟ್ಟಿದ್ದರೂ ಸಹ ಅವರಿಗೆ ಕೂಲಿ ಕೆಲಸ ನೀಡಿ ಅವರಿಗೆ ಹಣ-ಪಾವತಿಸಿದಂತೆ ದಾಖಲಾತಿ ಸೃಷ್ಟಿಸಿರುತ್ತಾರೆ. ಅಲ್ಲದೆ ಬಂಗಾರಮ್ಮ, ಕೃಷ್ಣಪ್ಪ ಹಾಗೂ ರಾಜೇಂದ್ರ ಇವರುಗಳ ಕೂಲಿ ಹಣವನ್ನು ಗ್ರಾಮಪಂಚಾಯ್ತಿ ಸದಸ್ಯರಾದ ನೀಲಪ್ಪ ಇವರು ತಮ್ಮ ಖಾತೆಗೆ ಜಮಾ ಮಾಡಿಕೊಂಡು ಕೂಲಿ ಕಾರ್ಮಿಕರಿಗೆ ಹಾಗೂ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವುದು ವಿಚಾರಣಾಧಿಕಾರಿಯವರ ವಿಚಾರಣಾ ವರದಿಯಿಂದ ಕಂಡುಬರುತ್ತದೆ.

ii. ಅರ್ಜಿಯಲ್ಲಿ ಅಪಾದಿಸಿರುವ 2ನೇ ಕಾಮಗಾರಿಯಾದ ಚಿಕ್ಕ ಅರಕೆರೆ ಗ್ರಾಮದ ಚೌಡಮ್ಮ ಕೋಂ ಕೆಂಚಪ್ಪ ಇವರ ಜಮೀನಿನ ಹತ್ತಿರ ಫೀಡರ್ ಚಾನಲ್ ಕಾಮಗಾರಿ ಹಾಗೂ 3ನೇ ಕಾಮಗಾರಿಯಾದ ಚಿಕ್ಕ ಅರಕೆರೆ ಸ.ನಂ.78 ರ ಪಕ್ಕದಲ್ಲಿರುವ ಸರ್ಕಾರಿ ಹಳ್ಳ ಫೀಡರ್ ಚಾನಲ್ ಕಾಮಗಾರಿಗಳನ್ನು ಯಂತ್ರದ ಮೂಲಕ ಮಾಡಿಸಲು ಸಾಧ್ಯವಿರದೇ ಇದ್ದು, ಕೂಲಿ ಕಾರ್ಮಿಕರಿಂದ ಮಾಡಿಸಿರುವುದು ವಿಚಾರಣಾ ವರದಿಯಿಂದ ಕಂಡುಬಂದಿರುತ್ತದೆ.

iii. ವಿಚಾರಣಾಧಿಕಾರಿಯವರು ಕೋರಿರುವಂತೆ ಜಗಳೂರು ತಾಲ್ಲೂಕು, ಗುತ್ತಿದುರ್ಗ ಗ್ರಾಮಪಂಚಾಯಿತಿಯ ಪಿ.ಡಿ.ಓ. ಮರುಳಸಿದ್ದಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಲತಾ, ಸದಸ್ಯರಾದ ನೀಲಪ್ಪ ಹಾಗೂ ತಾಂತ್ರಿಕ ಸಹಾಯಕರಾದ ಹರೀಶ್ ಇವರ ಮೇಲೆ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ

4. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಈ ಪ್ರಕರಣದಲ್ಲಿ ಗ್ರಾಮಪಂಚಾಯಿತಿಯ ಅಧ್ಯಕ್ಷರಾದ ಲತಾ, ಗ್ರಾಮಪಂಚಾಯಿತಿಯ ಸದಸ್ಯರಾದ ನೀಲಪ್ಪ, ಇವರನ್ನು ಈ ಪ್ರಕರಣದ 4 ಮತ್ತು 5ನೇ ಎದುರುದಾರರನ್ನಾಗಿ ಮಾಡಿ, ತನಿಖಾಧಿಕಾರಿಯ ವರದಿಯ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ 1, 3 ರಿಂದ 5ನೇ ಎದುರುದಾರರಿಗೆ ಆದೇಶಿಸಲಾಗಿತ್ತು.

5. ಸದರಿಯವರಿಗೆ ನೋಟೀಸು ಜಾರಿಯಾದರೂ ಸಹ ಅವರು ಯಾವುದೇ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

6. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಗುತ್ತಿದುರ್ಗ ಗ್ರಾಮಪಂಚಾಯಿತಿ ಪಿ.ಡಿ.ಓ, ಮರುಳಸಿದ್ದಪ್ಪ ಇವರು ಗ್ರಾಮಪಂಚಾಯಿತಿಯ ಅಧ್ಯಕ್ಷರಾದ ಲತಾ, ಸದಸ್ಯರಾದ ನೀಲಪ್ಪ ಮತ್ತು ತಾಂತ್ರಿಕ ಸಹಾಯಕರಾದ ಹರೀಶ್‌ರವರೊಂದಿಗೆ ಸೇರಿಕೊಂಡು, ಎಂ.ಜಿಎನ್.ಆರ್.ಇ.ಜಿ.ಎ, ಯೋಜನೆಯಡಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಯಂತ್ರಗಳಿಂದ ಮಾಡಿಸಿ ಅದನ್ನು ಕೂಲಿ ಕಾರ್ಮಿಕರು ಮಾಡಿದಂತೆ ದಾಖಲೆ ಸೃಷ್ಟಿಸಿರುವುದು ಮತ್ತು ಬಂಗಾರಮ್ಮ ಎನ್ನುವವರು ದಿ.13/5/16 ರಂದು ಮೃತಪಟ್ಟಿದ್ದರೂ ಸಹ ಅವರಿಗೆ ಕೂಲಿ ಕೆಲಸ ನೀಡಿ ಹಣ ಪಾವತಿಸಿದಂತೆ ದಾಖಲೆ ಸೃಷ್ಟಿಸಿರುತ್ತಾರೆ. ಅಲ್ಲದೆ ಬಂಗಾರಮ್ಮ, ಕೃಷ್ಣಪ್ಪ ಹಾಗೂ ರಾಜೇಂದ್ರ ಇವರುಗಳ ಕೂಲಿ ಹಣವನ್ನು ಗ್ರಾಮಪಂಚಾಯಿತಿಯ ಸದಸ್ಯರಾದ ನೀಲಪ್ಪ ಇವರು ತಮ್ಮ ಖಾತೆಗೆ ಜಮಾ ಮಾಡಿಕೊಂಡಿರುತ್ತಾರೆಂದು ವರದಿಯನ್ನು ನೀಡಿದ್ದು, ಸದರಿ ವರದಿಯನ್ನು ಪರಿಶೀಲಿಸಿದಾಗ, 1, 3 ರಿಂದ 5ನೇ ಎದುರುದಾರರು ಕರ್ತವ್ಯಲೋಪ ಎಸಗಿರುವುದು ಹಾಗೂ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಸದರಿಯವರು ಶಿಸ್ತು ಕ್ರಮಕ್ಕೆ ಭಾಧ್ಯಸ್ಥರಾಗಿರುತ್ತಾರೆ.

7. 1 ಮತ್ತು 3ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, 1 ಮತ್ತು 3ನೇ ಎದುರುದಾರರ

ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

8. 4 ಮತ್ತು 5ನೇ ಎದುರುದಾರರು ಜನಪ್ರತಿನಿಧಿಯಾಗಿದ್ದು, ಅವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43ಎ ರನ್ವಯ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

25/1/18

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**

20/01